ಕತ್ತಲಲ್ಲಿ ಕರಗಿ ಹೋಗುತ್ತೆ.

**◆ ಮಾಸ್ತಿ ಕಥೆಗಳನ್ನು ಮಕ್ಕಳಿಗೆ ಹೇಳುವ ಪ್ರಯತ್ನವನ್ನ ತಾವು ಮಾಡಿದ್ದೀರಿ. ಅದು ಮಾಸ್ತಿಯನ್ನು ತೆಲುಗಿಗೆ ಅನುವಾದ ಮಾಡಿಕೊಂಡು ನೀವೇ ಹೇಳಿದಂತ ಕ್ರಮಾನ? ಅಥವ ಕನ್ನಡದ ಮಕ್ಕಳಿಗೆ ಕನ್ನಡದಲ್ಲೇ ಹೇಳಿದಂತ ಕ್ರಮಾನ?**

ಮಾಸ್ತಿ ಕಥೆಗಳು ಮತ್ತು ಇತರರ ಕಥೆಗಳು, ಹಾಗು ಜಾನಪದ ಕಥೆಗಳನ್ನೂ ಸೇರಿಸಿಕೊಂಡು ನಾನು ಇಲ್ಲಿಯವರೆಗೂ ಕರ್ನಾಟಕ ಮತ್ತು ತೆಲುಗು ರಾಜ್ಯಗಳಲ್ಲಿ ಸುಮಾರು ಹದಿಮೂರು ಸಾವಿರ ಮಕ್ಕಳಿಗೆ ಕಥೆ ಹೇಳಿದ್ದೇನೆ. ತೆಲುಗುವ್ರೊಳಗೆ ಹೇಳುವಾಗ ಅಲ್ಲಿನ ಆ ಮಕ್ಕಳಿಗೆ ಪರಿಚಿತವಾದ ಕಥೆಗಾರರ ಹೆಸರುಗಳನ್ನು ಹೇಳಿ ತಾತ ಅಂತ ಸೇರಿಸಿಕೊಳ್ಳುತ್ತಿದ್ದೆ. ಕನ್ನಡದಲ್ಲೂ ಅದನ್ನೇ ಮಾಡುತ್ತಿದ್ದೆ. ತೆಲುಗಿನ ಮಕ್ಕಳಿಗೆ 'ಮನ ಮಾಸ್ತಿ ತಾತ ಕತಲು' ಅಂತ ಹೇಳುತ್ತಿದ್ದೆ. ಕನ್ನಡದ ಮಕ್ಕಳಿಗೆ ಹೇಳುವಾಗ 'ನಮ್ಮ ಗುರಜಾಡು ತಾತ ಕಥೆಗಳು' ಅಂತ ಹೇಳುತ್ತಿದ್ದೆ. ತಾತ ಅನ್ನೋದು ಒಂದು ಭಾವನಾತ್ಮಕವಾದಂತಹ ಸಂಬಂಧ. ಮಕ್ಕಳನ್ನ ಆ ರೀತಿ ತೆಕ್ಕೆಗೆ ತೆಗೆದುಕೊಳ್ಳುತ್ತಿದ್ದೆ. ಆಮೇಲೆ ಅಜ್ಜಿ-ತಾತ ಕಥೆ ಹೇಳೋದು ಪರಂಪರೇಲೆ ಇದೆ. ಹಾಗಾಗಿ ನನಗೆ ಅದು ಸುಲಭದ ಮಾರ್ಗವೂ ಆಗಿತ್ತು. ಮತ್ತು ಕಥೆ ಹೇಳುವಾಗ ಕಥೆಯನ್ನು ಹಾಗೆಯೇ ಇಟ್ಟುಕೊಂಡು ನಿರೂಪಣೆಯಲ್ಲಿರುವ ಗ್ರಾಂಥಿಕ ಭಾಷೆಯನ್ನು ಬದಲಿಸಿ ಆ ಮಕ್ಕಳ ತಾಯಿಯ ಭಾಷೆಯಲ್ಲಿ ಹೇಳುತ್ತಿದ್ದೆ. ಹಾಗಾಗಿ ಮಕ್ಕಳನ್ನು ಬಹುಬೇಗ ನನ್ನೊಳಗೆ ಸೆಳೆದುಕೊಳ್ಳಲು ಸಾಧ್ಯವಾಗುತ್ತಿತ್ತು. ಅಂದರೆ ಮಾಸ್ತಿ ಕನ್ನಡ ಮನೆಯ ಕಥೆಗಳನ್ನು ತೆಲುಗು ಮನೆಯ ಕನ್ನಡದ ತೋರಣವಾಗಿ ಹೇಳುವುದು. ಹಾಗಾದಾಗ ಮಾಸ್ತಿ ಅವರ ತಾತ ಆಗ್ತಾರೆ, ಗುರಜಾಡ ನಮ್ಮ ತಾತ ಆಗ್ತಾರೆ. ಮಕ್ಕಳಿಗೆ ಕಥೆ ಹೇಳಬೇಕಾದರೆ ನಾನು ರಘುನಾಥ ಅನ್ನುವುದನ್ನು ಮರೆತು ತಾತನಾಗಿ/ಅಜ್ಜಿಯಾಗಿ ಕಥೆಯನ್ನು ಹೇಳಬೇಕಾಗುತ್ತೆ. ಹಾಗಾದಲ್ಲಿ ಮಾತ್ರ ಮಕ್ಕಳಿಗೆ ಕತೆ ತಲುಪಲು ಸಾಧ್ಯ. ಆಗ ಮಾಸ್ತಿ, ಚಿತ್ತಾಲ, ಅನಂತಮೂರ್ತಿ... ಹೀಗೆ ಯಾರನ್ನ ಬೇಕಾದರೂ ತಗೊಂಡು ಹೋಗಬಹುದು. ಶ್ರಮ ಮುಖ್ಯ.

**◆ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ನೀವು ಸಾಹಿತ್ಯ, ಅನುವಾದದ ಜೊತೆಗೆ ಹಲವು ಸಮಾಜಮುಖಿ ಕೆಲಸಗಳನ್ನು ಬಹಳ ಕಾಲದಿಂದಲೂ ಮಾಡಿಕೊಂಡು ಬಂದಿದ್ದೀರಿ. ಕೊಡುವುದಕ್ಕಿಂತ ಪಡೆಯುವುದನ್ನೇ ಬಯಸುವ ಇಂದಿನ ದಿನಮಾನಗಳಲ್ಲಿ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದ ನಿಮ್ಮ ಕೆಲಸ ಅನುಕರಣೀಯ. ಈ ನಿಟ್ಟಿನಲ್ಲಿ 'ನಮ್ಮ ಮಕ್ಕಳು' ಸಂಸ್ಥೆ, 'ಹಸಿರು-ಹೊನ್ನು' ಬಳಗ, 'ಹಸಿರು ಹೊನ್ನೂರು' ಗ್ರಾಮ, ಅಲೆಮಾರಿ ಮಕ್ಕಳ ಶಾಲೆ, ಇವುಗಳ ಕುರಿತಾಗಿ ಸಂಕ್ಷಿಪ್ತವಾಗಿ ತಿಳಿಸಿ.**

ಯಾವ ಪ್ರತಿಫಲಾಪೇಕ್ಷೆಯೂ ಇಲ್ಲ ಅನ್ನೋ ಮಾತು ಇದೆಯಲ್ಲ, ಅದು ಅರ್ಧ ಸತ್ಯ. ಯಾಕೆ ನಾನು ಅರ್ಧ ಸತ್ಯ ಅಂತ ಹೇಳ್ತೀನಿ ಅಂದ್ರೆ, ನನಗೊಂದು ಪ್ರತಿಫಲಾಪೇಕ್ಷೆ ಇದೆ. ಅದು ಕಾಣುವಂತಹ ಪ್ರತಿಫಲಾಪೇಕ್ಷೆಯಲ್ಲ. ಯಾರು 'ನಮ್ಮ ಮಕ್ಕಳು' ಮುಖಾಂತರ ಮುಂದೆ ಬರ್‍ತಾರೆ, ಅಂತಹವರು ಆದರೆ ಸಮಾಜಕ್ಕೆ ಏನಾದರು ಮಾಡಲಿ. ಇಲ್ಲವೆಂದಲ್ಲಿ ತಮ್ಮ ಕಾಲ ಮೇಲೆ ತಾವು ನಿಂತು ಪ್ರಾಮಾಣಿಕವಾಗಿ ದುಡಿದು ತಂತಮ್ಮ ಕುಟುಂಬಗಳನ್ನು ನೆಮ್ಮದಿಯ ದಿಕ್ಕಿನತ್ತ ಸಾಗಿಸಲಿ ಅನ್ನೋ ಪ್ರತಿಫಲಾಪೇಕ್ಷೆ.

'ನಮ್ಮ ಮಕ್ಕಳು' ಒಂದು ವಿಚಿತ್ರವಾದ ಸೃಷ್ಟಿ. ನಾನು ಅಡ್ಡಗಲ್ ಶಾಲೆಯಲ್ಲಿ ಇದ್ದಾಗ ಒಬ್ಬಳು ಭಿಕ್ಷುಕಿ, ದಿನ ತುಂಬಿದ ಬಸುರಿ. ಮನೆ ಮನೆ ಅಲೆಯೋದು. ಬೇವಿನ ಮರದ ಕೆಳಗೆ ಆಶ್ರಯ ಪಡೆಯೋದು. ನನಗೆ ಯಾಕೋ ಆಕೆಗೆ ಸಹಾಯ ಮಾಡಬೇಕು ಅನಿಸೋದು. ಆಗ ಶಾಲೆಗಳಲ್ಲಿ ಉಪ್ಪಿಟ್ಟು ಕೊಡುತ್ತಿದ್ದಿವಿ. ನಾನು ಕೆಲಸದಲ್ಲಿದ್ದಾಗ ಇಲಾಖೆಯ ನಿಯಮಗಳಿಗೆ ವಿರುದ್ಧವಾದ ಕೆಲಸಗಳನ್ನು ಬಹಳಷ್ಟು ಮಾಡಿದ್ದೇನೆ. ಹಾಗೆಯೇ ಆಕೆಗೂ ಉಪ್ಪಿಟ್ಟು ಕೊಡಲು ಶುರು ಮಾಡಿದೆ. 'ದಿನಾ ಉಪ್ಪಿಟ್ಟು ಕೊಡ್ತೇನೆ, ಭಿಕ್ಷೆಗೆ ಹೋಗಬೇಡ, ವಿಶ್ರಾಂತಿ ತಗೋ' ಅಂದೆ. ರಾತ್ರಿ ಹೊತ್ತು ಅನಿವಾರ್ಯವಾದಾಗ ಭಿಕ್ಷೆಗೆ ಹೋಗೋಳು. ಹುಟ್ಟೋ ಮಗೂನ ಓದಿಸಬೇಕು ಅನ್ನೋ ಷರತ್ತಿನಲ್ಲೇ ಅವಳಿಗೆ ಊಟ ಹಾಕುತ್ತಿದ್ದದ್ದು. ಅದಕ್ಕೆ ಅವಳೂ ಒಪ್ಪಿದ್ದಳು. ಆದರೆ, ಹೆರಿಗೆ ಆದ ಎರಡು ತಿಂಗಳಿಗೆ ಅವಳು ಮಗುವಿನ ಸಮೇತ ಕಾಣೆಯಾಗಿದ್ದಳು. ಅದು ನನ್ನನ್ನ